ಅ) ಹೌದು

ಮೇಲ್ಚಾವಣಿ ಪ್ರಯಾಣವನ್ನು ತಪ್ಪಿಸುವ ಸಲುವಾಗಿ ಅಧಿಕ ಅನುಸೂಚಿಗಳನ್ನು ಪ್ರಾರಂಭಿಸಲು ಕ್ಷೇತ್ರ (ಸಂಚಾರ) ಅಧಿಕಾರಿಗೆ ಸೂಕ್ತ ನಿರ್ದೇಶನವನ್ನು ನೀಡಲಾಗಿದೆ.

ಮಂಡ್ಯ ನಗರದಲ್ಲಿರುವ ಕ.ರಾ.ಸಾ.ಸಂ. ಬಸ್‌ನಿಲ್ದಾಣದ ಅಭಿವೃದ್ಧಿ

1655 - ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ) ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಮಂಡ್ಯ ನಗರದಲ್ಲಿರುವ ಕರ್ನಾಟಕ ರಾಜ್ಯದ ರಸ್ತೆ ಸಾರಿಗೆ ಸಂಸ್ಥೆಯ ಬಸ್‌ನಿಲ್ದಾಣವು ಈಗಿನ ಬಸ್ಸುಗಳ ಸಂಖ್ಯೆ ಹಾಗೂ ಪ್ರಯಾಣಿಕರುಗಳ ಹೆಚ್ಚಳಕ್ಕೆ ಅನುಗುಣವಾಗಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ.

ಆ) ಈ ಬಸ್‌ನಿಲ್ದಾಣದ ವಿಸ್ತರಣೆಯ ಬಗೆಗಿನ ಅವಶ್ಯಕತೆಯನ್ನು ಸರ್ಕಾರ ಮನಗಂಡಿದೆಯೆ.

ಇ) ಹಾಗಿದ್ದಲ್ಲಿ ಮಂಡ್ಯ ನಗರದ ಬಸ್ ನಿಲ್ದಾಣವನ್ನು ವಿಸ್ತರಣೆ ಮಾಡಿ ಅಭಿವೃದ್ಧಿಪಡಿಸಲು ಸರ್ಕಾರ ಏನು ಕ್ರಮ ಕೈಗೊಂಡಿದೆ?

ಶ್ರೀ ಅಜೀಜ್ ಸೇಠ್, (ಸಾರಿಗೆ ಸಚಿವರು) :

ಅ) ಬಂದಿದೆ.

ಆ) ಮನಗಂಡಿದೆ

ಇ) ವಿಸ್ತರಣೆ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.

ಚಿಕ್ಕಮಗಳೂರು ನಗರದಲ್ಲಿ ಸಂಚಾರಿ ವ್ಯವಸ್ಥೆ

1726 - ಶ್ರೀ ಸಿ.ಆರ್. ಸಗೀರ್ ಅಹಮದ್ (ಚಿಕ್ಕಮಗಳೂರು) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಚಿಕ್ಕಮಗಳೂರು ನಗರದ ಜನತೆಗೆ ನಗರದ ಸಂಚಾರಕ್ಕೆ ಸಂಚಾರಿ ವ್ಯವಸ್ಥೆಯ ತೊಂದರೆ ಇರುವುದರಿಂದ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆವತಿಯಿಂದ ನಗರ ಸಂಚಾರಿ ವ್ಯವಸ್ಥೆಯ ಬೇಡಿಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಸರ್ಕಾರ ಯಾವ ಕ್ರಮ ಕೈಗೊಳ್ಳುತ್ತಿದೆ?

ಇ) ಸರ್ಕಾರ ಈ ಮನವಿಯನ್ನು ಪುರಸ್ಕರಿಸುವುದೆ?

ಶ್ರೀ ಅಜೀಜ್ ಸೇಠ್, (ಸಾರಿಗೆ ಸಚಿವರು) :

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ

ಇ) ಉದ್ಭವಿಸುವುದಿಲ್ಲ

ಪಠ್ಯಪುಸ್ತಕಗಳ ಅಭಾವ

1641 - ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) ಮಾನ್ಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಪಠ್ಯ ಪುಸ್ತಕಗಳ ಅಭಾವ ಪ್ರತಿ ವರ್ಷ ತಲೆದೋರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

2) ಹಾಗಿದ್ದಲ್ಲಿ, ಅಭಾವವನ್ನು ಹೋಗಲಾಡಿಸಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಎಂ. ವೀರಪ್ಪಮೊಯಿಲಿ, (ಶಿಕ್ಷಣ ಮಂತ್ರಿಗಳು) :